## ▶ ವಿದ್ಯಾರತ್ನ ಶಾಲೆಯಲ್ಲಿ 'ಕನಕಾಭಿಯಾನ' ಉದ್ಘಾಟನೆ

# ಕನಕದಾಸರು ಸಮಾನತೆ ಸಾರಿದ ಕವಿ




**ಉಳ್ಳಾಲ, ಫೆ. 4:** ಕನಕದಾಸರು ಜಾತಿ ಮೀರಿದ ಕವಿ. ಭಕ್ತಿಯಿಂದ ದೇವರನ್ನು ಒಲಿಸಿಕೊಂಡ, ಸಾಮಾಜಿಕ ಸಮಾನತೆಯನ್ನು ಸಾರಿದ ಕವಿ ಎಂದು ದೇರಳಕಟ್ಟೆಯ ವಿದ್ಯಾರತ್ನ ವಿದ್ಯಾಸಂಸ್ಥೆಯ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯ ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ ದೇರಳಕಟ್ಟೆ ವಿದ್ಯಾರತ್ನ ಶಾಲೆಯಲ್ಲಿ ನಡೆದ 2024–25ನೇ ಸಾಲಿನ 'ಕನಕಾಭಿಯಾನ' ವಿದ್ಯಾರ್ಥಿಗಳಿಗೆ ಕನಕ ಚಿಂತನೆ ಪ್ರಸಾರ – ಕನಕದಾಸರ ಜೀವನ ಮತ್ತು ಸಾಹಿತ್ಯದ ಕುರಿತು ಉಪನ್ಯಾಸ ಮತ್ತು ರಸಪ್ರಶ್ನೆ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕ ಡಾ। ಧನಂಜಯ ಕುಂಬ್ಳೆ ಅಧ್ಯಕ್ಷತೆ ವಹಿಸಿ, ಸಂತರು ಸಮಾಜಕ್ಕಾಗಿ ತಮ್ಮ ಬದುಕನ್ನು ಮುಡಿಪಿಟ್ಟವರು. ವೈಯಕ್ತಿಕ ಹಿತಾಸಕ್ತಿಯ ಬದುಕನ್ನು ಬದುಕಿದವರು ಮರೆತುಹೋಗುತ್ತಾರೆ. ಸಮಾಜಕ್ಕಾಗಿ ಬದುಕಿದವರು ಕೀರ್ತಿ ಹೊಂದುತ್ತಾರೆ. ಕನಕದಾಸರು ಬಾಡದ ಚೇತನ. ಎಂದೆಂದಿಗೂ ನಮಗೆ ಬೇಕಾದ ಚೇತನ ಎಂದರು.

ರತ್ನ ಎಜುಕೇಶನ್ ಟ್ರಸ್ಟ್ ದೇರಳಕಟ್ಟೆ ಕಾರ್ಯದರ್ಶಿ ಸೌಮ್ಯ ಆರ್. ಶೆಟ್ಟಿ ವಿದ್ಯಾರತ್ನ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ನಯೀಮ್ ಹಮೀದ್ ಉಪಸ್ಥಿತರಿದ್ದರು. ಕನಕಾಭಿಯಾನದ ಸಂಯೋಜಕ ಆನಂದ ಎಂ. ಕಿದೂರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕನಕದಾಸರ ಜೀವನ ಮತ್ತು ಸಾಹಿತ್ಯದ ಕುರಿತು ಉಪನ್ಯಾಸ ನೀಡಿ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಶಾಲಾ ಶಿಕ್ಷಕ ನವೀನ್ ಸ್ವಾಗತಿಸಿದರು, ಶ್ರೀ ರವಿಕುಮಾರ್ ಕೋಡಿ ನಿರೂಪಿಸಿದರು. ಕೇಂದ್ರದ ಸಂಶೋಧನ ಸಹಾಯಕ ಪ್ರಸಾದ್ ಆರ್., ಸಿಬಂದಿ ಸರಿತ ಉಪಸ್ಥಿತರಿದ್ದರು.

# ಮಂಗಳೂರು ವಿವಿ ಕನಕಾಭಿಯಾನ ಉದ್ಘಾಟನೆ



ಕೊಣಾಜೆ, ಫೆ.5: ಕನಕದಾಸರು ಜಾತಿ ಮೀರಿದ ಕವಿ. ಭಕ್ತಿಯಿಂದ ದೇವ ರನ್ನು ಒಲಿಸಿಕೊಂಡ, ಸಾಮಾಜಿಕ ಸಮಾನತೆಯನ್ನು ಸಾರಿದ ಕವಿ ಎಂದು ದೇರಳಕಟ್ಟೆಯ ವಿದ್ಯಾರತ್ನ ವಿದ್ಯಾಸಂಸ್ಥೆಯ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಹೇಳಿದ್ದಾರೆ.

ಅವರು ಮಂಗಳೂರು ವಿವಿಯ ಕನಕದಾಸ ಸಂಶೋಧನಾ ಕೇಂದ್ರದ ವತಿಯಿಂದ ದೇರಳಕಟ್ಟೆ ವಿದ್ಯಾರತ್ನ ಶಾಲೆಯಲ್ಲಿ ನಡೆದ 2024-25ನೇ ಸಾಲಿನ ಕನಕಾಭಿಯಾನ- ವಿದ್ಯಾರ್ಥಿಗಳಿಗೆ ಕನಕ ಚಿಂತನೆ ಪ್ರಸಾರ- ಕನಕದಾಸರ ಜೀವನ ಮತ್ತು ಸಾಹಿತ್ಯದ ಕುರಿತು ಉಪನ್ಯಾಸ ಮತ್ತು ರಸಪ್ರಶ್ನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕನಕದಾಸ ಸಂಶೋಧನಾ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಮಾತನಾಡಿದರು. ಕನಕಾಭಿಯಾನದ ಸಂಯೋಜಕ ಆನಂದ ಎಂ. ಕಿದೂರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕನಕದಾಸರ ಜೀವನ ಮತ್ತು ಸಾಹಿತ್ಯದ ಕುರಿತು ಉಪನ್ಯಾಸ ನೀಡಿ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಈ ಸಂದರ್ಭ ದೇರಳಕಟ್ಟೆಯ ರತ್ನ ಎಜ್ಯುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಸೌಮ್ಯಾ ಆರ್. ಶೆಟ್ಟಿ, ವಿದ್ಯಾರತ್ನ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ನಯೀಮ್ ಹಮೀದ್, ಸಂಶೋಧನಾ ಸಹಾಯಕ ಪ್ರಸಾದ್ ಆರ್., ಸಿಬ್ಬಂದಿ ಸರಿತಾ ಉಪಸ್ಥಿತರಿದ್ದರು.

ಶಾಲಾ ಶಿಕ್ಷಕರಾದ ನವೀನ್ ಸ್ವಾಗತಿಸಿದರು. ರವಿಕುಮಾರ್ ಕೋಡಿ ಕಾರ್ಯಕ್ರಮ ನಿರೂಪಿಸಿದರು.

Mangalore Edition
Feb 6, 2025 Page No. 4